ಮಾರಬೇಕು. ಕೆಲವೇ ದಿನಗಳಲ್ಲಿ ನನ್ನ ಮದುವೆಯಾಗುವುದಿದೆ. ನನ್ನ ಕೋಣೆ ಇನ್ನೂ ಸಜ್ಜಾಗಿಲ್ಲ. ನಮ್ಮ ಯಾವುದೇ ವಸ್ತುಗಳು ಇಲ್ಲಿಲ್ಲ. ಯಾರಿಗೂ ಬೇಡದ ಈ ದರಿದ್ರ ಪಿಯಾನೊ ನನ್ನ ಬದುಕನ್ನೇ ಹಾಳು ಮಾಡುತ್ತಿದೆ.'

'ಮೆತ್ತಗೆ ಮಾತನಾಡು. ಅಪ್ಪನಿಗೆ ಕೇಳಬಹುದು.'

'ಅವನಿಗೆ ಕೇಳಲಿ ಅಂತಲೇ ನಾನು ಬಯಸುವುದು.' ಆಕೆ ಮತ್ತೆ ಬಿಕ್ಕಿ ಬಿಕ್ಕಿ ಅಳುತ್ತಾ ಕಣ್ಣೊರಸಿಕೊಂಡಳು.

ಆ ರಾತ್ರಿ ಯಾವ್ವೋ ದೆ ಒಲಿವ್ವೈರಾ ನಿದ್ರಿಸಲಿಲ್ಲ. ಬದುಕಿನ ಬಗ್ಗೆ ಧ್ಯಾನಿಸಿದ. ಅವನ ಯೋಚನೆಗಳು ಗೊಂದಲದ ಗೂಡಾಗಿದ್ದುವಲ್ಲದೇ ವಿಷಣ್ಣತೆಯೂ ಸೇರಿತ್ತು. ಅದರಿಂದಾಗಿ ಬದುಕಿನ ಬಗ್ಗೆಯೂ ಪಿಯಾನೊದ ಬಗ್ಗೆಯೂ ರೋಷವುಂಟಾಯಿತು. ಬೇಗ ಮನೆ ಬಿಟ್ಟು ಹತ್ತಿರದ ಒಂದು ಪಾನಗೃಹಕ್ಕೆ ಹೋಗಿ ಅಲ್ಲಿದ್ದ ಹಲವು ಜನರೊಡನೆ ಮಾತನಾಡಿದ.

ಅಂಥ ಜಾಗದಲ್ಲಿ ನನ್ನ ಗಂಡನೇನು ಮಾಡುತ್ತಾನೆ? ಎಂದು ರೊಸಾಲಿಯ ತನ್ನನ್ನು ತಾನು ಕೇಳಿಕೊಂಡಳು. ಯಾವ್ವೋನಿಗೆ ಕುಡಿತದ ಚಟವಿರಲಿಲ್ಲ.

ಹಿಂದೆ ಬರುವಾಗ ಅವನ ಜೊತೆ ಕೊಳೆ ಕೊಳೆಯಾದ ಉಡುಪು ತೊಟ್ಟ ಒಬ್ಬ ನೀಗ್ರೊ ಮತ್ತು ಇಬ್ಬರು ಸಮವಸ್ತ್ರದ ಒರಟಾದ ಪೋರ್ಚುಗೀಸ್‌ರು ಇದ್ದರು. ಅವನು ಅವರಿಗೆ ಪಿಯಾನೊವನ್ನು ತೋರಿಸಿದ. ಅವರು ಅದನ್ನೆತ್ತಲು ಪ್ರಯತ್ನಿಸಿ ತಾವು ಮೂವರಿಂದ ಮಾತ್ರ ಎತ್ತುವುದು ಅಸಾಧ್ಯ ಎಂದು ಅಭಿಪ್ರಾಯಪಟ್ಟರು.

ರೊಸಾಲಿಯ ಮತ್ತು ಸಾರಾ ಆಶ್ಚರ್ಯ ಚಕಿತರಾದರು.

'ಕೊಳ್ಳುವವರು ಯಾರಾದರೂ ಸಿಕ್ಕಿದರೇ?' ಎಂದು ಕೇಳಿದಳು ರೊಸಾಲಿಯ.

'ಇಲ್ಲ. ಈ ಪಿಯಾನೊವನ್ನು ಯಾರೂ ಖರೀದಿಸೋದಿಲ್ಲ.'

'ಕೊಟ್ಟು ಬಿಡ್ತೀಯಾ?'

'ಇಲ್ಲ. ಪುಕ್ಕಟೆ ಕೊಟ್ಟರೂ ಯಾರೂ ತಗೊಳ್ಳುವವರಿಲ್ಲ.'

'ಹಾಗಿದ್ದರೆ ಏನು ಮಾಡ್ತೀಯ ಯಾವ್ವೋ? ಏನು ಮಾಡುತ್ತಿ, ಅದನ್ನಾದರೂ ಹೇಳು.'

ಯಾವ್ವೋನ ಕಣ್ಣಲ್ಲಿ ನೀರು ಜಿನುಗಿತು. ಆದರೆ, ಮುಖಭಾವ ಮಾತ್ರ ನಿಷ್ಠುರವಾಗಿತ್ತು.

'ಎತ್ತಿ ಅದನ್ನು ಸಮುದ್ರಕ್ಕೆಸೆಯುತ್ತೇನೆ.'

ಸಾರಾ, `ಓಹ್, ಇಲ್ಲಪ್ಪ, ಏನು ಹುಚ್ಚೇ ನಿನಗೆ?' ಎಂದುದ್ಗರಿಸಿದಳು.

ಅವರ ಕಿಟಕಿಯಿಂದ ಸಮುದ್ರವೇನೂ ಕಾಣುತ್ತಿರಲಿಲ್ಲ. ಆದರೆ, ಅದರ ವಾಸನೆ ಇತ್ತು. ಘೋರ್ಗರೆತವೂ ಕೇಳಿಸುತ್ತಿತ್ತು. ಯಾಕೆಂದರೆ ದಡಕ್ಕೆ ಸಮಾನಾಂತರವಾಗಿ ಇದ್ದ ರಸ್ತೆಯ ಮೂರು ಕಟ್ಟಡಗಳ ಆಚೆ ಅವರ ಮನೆ. ಆ ಜನರು ತಮ್ಮೊಳಗೆ ಮಾತನಾಡುತ್ತಾ ಕಾಯುತ್ತಾ ನಿಂತಿದ್ದರು.

ಅವನ ಹೆಂಡತಿ, 'ಎಷ್ಟು ಧೈರ್ಯ ನಿನಗೆ ಯಾವ್ವೋ? ಆ ಬಗ್ಗೆ ನಾವು ಮೊದಲು ಚರ್ಚಿಸುವ ಅಗತ್ಯವಿಲ್ಲವೇ? ಬೇರೆ ದಾರಿಯೇ ಇಲ್ಲವೇ? ಪಿಯಾನೊವನ್ನು ನೀರಿಗೆ ಎಸೆಯುವುದೆಂದರೆ ಸರೀಕರು ನಗಲಾರರೇ?' ಎಂದಳು.

'ಬೇರೇನು ಮಾಡಲಿ ರೊಸಾಲಿಯ? ಎಷ್ಟೋ ಹಡಗುಗಳು ನೀರಿನ ಆಳಕ್ಕೆ ಮುಟ್ಟುತ್ತವೆ. ಕೆಲವದರಲ್ಲಿ ಪಿಯಾನೊಗಳೂ ಇರುತ್ತವೆ.'

ಈ ಅಲ್ಲಗಳೆಯಲಾಗದ ವಾದ ಅವಳ ಬಾಯಿ ಮುಚ್ಚಿಸಿತು. ಯಾವ್ವೋ ನಿರ್ಧಾರ ಮಾಡಿಯಾಗಿತ್ತು.

'ಸರಿ, ಎಲ್ಲರೂ ಎತ್ತಿ ಅದನ್ನು. ಬನ್ನಿ ಹೋಗೋಣ' ಎಂದ ಅವನು.

ಪೋರ್ಚುಗೀಸರಲ್ಲಿ ಒಬ್ಬಾತ ಎದುರಿಗೆ ಬಂದು ತನ್ನ ಜೊತೆಯವರ ಪರವಾಗಿ, ಮತ್ತು ತನ್ನ ಪರವಾಗಿಯೂ ಅದನ್ನೆತ್ತುವುದು ಸಾಧ್ಯವಾಗದು ಎಂದು ವಿನಯದಿಂದ ಹೇಳಿದ. ಅಲ್ಲದೇ ಇಂಥ ವಸ್ತುವನ್ನು ನೀರಿಗೆಸೆಯುವುದೆಂದರೆ ತಮ್ಮ ಅಂತಃಸ್ಸಾಕ್ಷಿಗೆ ನೋವಾದೀತೆಂದು ಹೇಳಿ ಕ್ಷಮೆ ಯಾಚಿಸಿದ. ಅದೊಂದು ಅಪರಾಧವೇ ಎಂದೂ ಸೇರಿಸಿದ.

'ಧನಿಯರೇ, ನೀವು ಯಾಕೆ ಪತ್ರಿಕೆಯಲ್ಲೊಂದು ಜಾಹೀರಾತು ಕೊಡಬಾರದು? ಪಿಯಾನೊ ಚೆನ್ನಾಗಿಯೇ ಇದೆ.'

'ಗೊತ್ತು. ನೀವು ಹೋಗಬಹುದು' ಎಂದು ಒಲಿವ್ವೈರಾ ಉತ್ತರಿಸಿದ.

ಅವರು ಹೊರಟುಹೋದರು. ಆ ನೀಗ್ರೋ ಪಿಯಾನೊವನ್ನು ತಾನೇ ಎತ್ತಿಕೊಳ್ಳುವ